**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.296/2018**

**(ಪ್ರಾ.ಸಾ.20 / ಚಾ.ಸಾ.34)**

ತಾಃ 10-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ಡಾಃ ಆಶೋಕ್ ಕುಮಾರ್

ತಂದೆಯ ಹೆಸರು : ಲೇಟ್ಃ ವೆಂಕಟರಾಯಪ್ಪ
ವಯಸ್ಸು : 50 ವರ್ಷ
ಉದ್ಯೋಗ : ವೈದ್ಯಾಧಿಕಾರಿಗಳು, ಓಂ ಪಾಲಿ ಕ್ಲಿನಿಕ್, ಹೆಚ್.ಕ್ರಾಸ್.
ವಾಸ ಸ್ಥಳ : ಬೆಂಗಳೂರು.

**ಮುಖ್ಯ ವಿಚಾರಣೆ : ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಳೆದ 26 ವರ್ಷಗಳಿಂದ ಹೆಚ್.ಕ್ರಾಸ್‌ನಲ್ಲಿ ಓಂ ಪಾಲಿ ಕ್ಲಿನಿಕ್ ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇನೆ. ನಾನು 2003 ರಲ್ಲಿ ಮುನಿಮಲ್ಲಪ್ಪ ಕಡೆಯಿಂದ ಚಿಕ್ಕಕೊಂಡಹಳ್ಳಿಯಲ್ಲಿ ಸರ್ವೆ ನಂ.130/2 ರಲ್ಲಿ 2 ಎಕರೆ 30 ಗುಂಟೆ ಜಮೀನನ್ನು ಶುದ್ದ ಕ್ರಯಕ್ಕೆಕೊಂಡು ಕೊಂಡಿರುತ್ತೇನೆ. ದಾಖಲೆಗಳು ನನ್ನ ಹೆಸರಿನಲ್ಲಿ ಇರುತ್ತವೆ.

2. ನಂತರದ ದಿನಗಳಲ್ಲಿ ಮುನಿಮಲ್ಲಪ್ಪ ಮತ್ತು ಅವರ ಮಕ್ಕಳು ತಮಗೆ ಹಣದ ಅವಶ್ಯಕತೆ ಇದುದ್ದರಿಂದ ನನ್ನಲ್ಲಿ ಜಮೀನು ದಾಖಲೆಗಳನ್ನು ಅಡಮಾನ ಇಟ್ಟು ಹಣವನ್ನು ತೆಗೆದುಕೊಂಡಿರುತ್ತೇವೆ, ಆದರೆ ನಾವು ನಿಮಗೆ ಮಾರಾಟ ಮಾಡಿಲ್ಲ ಹಾಗೂ ರಿಜಿಸ್ಟ್ರೇಷನ್ ಮಾಡಿಕೊಟ್ಟಿರುವುದಿಲ್ಲ ಎಂದು ಹೊಸಕೋಟೆ ನ್ಯಾಯಾಲಯದಲ್ಲಿ ಸಿವಿಲ್ ದಾವೆಯನ್ನು ಹೂಡಿರುವುದಾಗಿ ತಿಳಿಸಿದರು, ಸದರಿ ದಾವೆಯು ಹೊಸಕೋಟೆ ನ್ಯಾಯಾಲಯದಲ್ಲಿ ನನ್ನ

ಪರವಾಗಿ ತೀರ್ಪು ಬಂದಿರುತ್ತದೆ. ಇದೇ ರೀತಿ ಪಕ್ಕದ ಜಮೀನಿಗೆ ಸಂಬಂಧಿಸಿದಂತೆ ನಡೆಯುತ್ತಿದ್ದ ವಿಚಾರ ನನಗೆ ಗೊತ್ತಾಯಿತು. ದೇವಶೆಟ್ಟಿಹಳ್ಳಿಯಲ್ಲಿ ನಾರಾಯಣಪ್ಪ ಎಂಬುವರಿಗೆ ಹಾಗೂ ಮುನಿಮಲ್ಲಪ್ಪ ಮತ್ತು ಅವರ ಮಕ್ಕಳ ನಡುವೆ ಜಮೀನು ವಿಚಾರವಾಗಿ ಏನೋ ನಡೆಯುತ್ತಿತ್ತು. ನಾನು ದೇವಶೆಟ್ಟಿಹಳ್ಳಿ ನಾರಾಯಣಪ್ಪನನ್ನು ನೋಡಿರುವುದಿಲ್ಲ. ಈ ಮೇಲಿನ ವಿಚಾರದ ಕುರಿತು ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಂ.ಪಿ. ವಕೀಲರಿಂದ ಃ**

ನಾನು ಸರ್ವೆ ನಂ.130/2 ರಲ್ಲಿ 2 ಎಕರೆ 30 ಗುಂಟೆ ಜಮೀನು ಮುನಿಮಲ್ಲಪ್ಪನವರ ಸ್ವಯಾರ್ಜಿ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಅದೇ ರೀತಿ ದೇವಶೆಟ್ಟಿ ಹಳ್ಳಿಯ ನಾರಾಯಣಪ್ಪರವರು ಮುನಿಮಲ್ಲಪ್ಪರವರಿಂದ 30 ಗುಂಟೆ ಜಮೀನನ್ನು ಖರೀದಿ ಮಾಡಿರುವ ವಿಚಾರ ಗಲಾಟೆಯಾದ ನಂತರ ನನಗೆ ಗೊತ್ತಾಯಿತು.

2. ದಿನಾಂಕ 18-08-2011 ರಂದು ಮುನಿಮಲ್ಲಪ್ಪನವರ ಮಕ್ಕಳಾದ ಕವಿತಾ ಮತ್ತು ರಮೇಶ್ ಹಾಗೂ ಇತರರು ನನ್ನ ಜಮೀನಿನ ಒಳಗೆ ಅಕ್ರಮವಾಗಿ ಪ್ರವೇಶ ಮಾಡಿ ಜಮೀನಿನಲ್ಲಿ ಇದ್ದ ಬೆಳೆಯನ್ನು ನಾಶ ಮಾಡಿರುತ್ತಾರೆ ಎಂದರೆ ಸರಿ. ಈವಿಚಾರವಾಗಿ ನಾನು ಮತ್ತು ವೆಂಕಟರಾಯಪ್ಪರವರು ಕವಿತಾ ಮತ್ತು ರಮೇಶ್‌ರವರ ಹತ್ತಿರ ಕೇಳಲು ಹೋದಾಗ ಸದರಿಯವರು ರಾತ್ರಿಯ ಹೊತ್ತು ನೀವು ಕ್ಲಿನಿಕ್ ಮುಚ್ಚಿಕೊಂಡು ಹೋಗುವಾಗ ನಿಮ್ಮ ಮೇಲೆ ಅಪಘಾತಪಡಿಸಿ ಸಾಯಿಸುತ್ತೇವೆ ಎಂದು ಜೀವ ಬೆದರಿಕೆ ಹಾಕಿದ ವಿಚಾರವಾಗಿ ಸದರಿಯವರು ವಿರುದ್ಧ ಮೊಕದ್ದಮೆ ಸಂಖ್ಯೆ.216/2011 ರಂತೆ ನಂದಗುಡಿ ಪೋಲಿಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ನನಗೆ ರಮೇಶ್ ಮತ್ತು ಕವಿತಾರವರು ಬೆದರಿಸಿ ತೊಂದರೆ ಕೊಟ್ಟಿದ್ದರಿಂದ ನಾನು ದೂರು ನೀಡಿರುತ್ತೇನೆ ಎಂದರೆ ಸರಿ.

3. ಇದಾದ ನಂತರ ಮೇಲೆ ಹೇಳಿದ ಸರ್ವೆ ನಂಬರ್ ಆಸ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ನಿರ್ಭಂದಕ ಆದೇಶವನ್ನು ನೀಡಬೇಕೆಂದು ಓ.ಎಸ್.410/2013 ಸಲ್ಲಿಸಿದ್ದು ಸದರಿ ದಾವೆಯಲ್ಲಿ ತಾತ್ಕಾಲಿಕ ನಿಶೇದಾಜ್ಞೆಯನ್ನು ಮಾನ್ಯ ನ್ಯಾಯಾಲಯವು ನೀಡಿರುತ್ತದೆ.

4. ದಿನಾಂಕ 20-08-2014 ರಂದು ರಮೇಶ್ ಹಾಗೂ ಕವಿತಾರವರು ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಜೆ.ಸಿ.ಬಿ.ಯಿಂದ ಗುಂಡಿಯನ್ನು ತೆಗೆಸಿದ್ದು ಈ ವಿಚಾರವನ್ನು ಕೇಳಲು ಹೋದಾಗ ಸದರಿಯವರು ನನಗೆ ಜೀವಬೆದರಿಕೆ ಹಾಕಿದ್ದು ಆದ ಕಾರಣ ಸದರಿಯವರ ವಿರುದ್ಧ ದೂರನ್ನು ನೀಡಿರುತ್ತೇನೆ. ಅದರ ಮೊಕದ್ದಮೆ ಸಂಖ್ಯೆ.197/2014 ಆಗಿರುತ್ತದೆ. ಸದರಿ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಗೆ ಇರುವ ಬಗ್ಗೆ ನನಗೆ ಗೊತ್ತಿಲ್ಲ.

**ಮರುವಿಚಾರಣೆಃ** ಇಲ್ಲ

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಚೆನ್ನಪ್ಪ ಗೌಡ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.